**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 190/2017**

**ಪಿಡಬ್ಲ್ಯೂ-3**

**ಸಿಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | - | ಪುರುಷೋತ್ತಮ |
| ತಂದೆಯ ಹೆಸರು | - | ಶಿವಲಿಂಗೇಗೌಡ |
| ವಯಸ್ಸು | - | 48 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ರಾಂಪುರ ಗ್ರಾಮ |

**ದಿನಾಂಕ 04-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿನಾಂಕ 06.09.2016 ರಂದು ಸಂಜೆ ಸುಮಾರು 6.30 ಗಂಟೆ ಸಮಯಕ್ಕೆ ಸಾಲಿಗ್ರಾಮದವರು ದೂರವಾಣಿ ಮುಖಾಂತರ ಕರೆ ಮಾಡಿ ನಮ್ಮ ಗ್ರಾಮದ ಧನುಷ ಇವರಿಗೆ ಅಪಘಾತವಾದ ವಿಚಾರ ತಿಳಿಸಿದರು. ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಅಲ್ಲಿ ಧನುಷಗೆ ತೀವ್ರ ಸ್ವರೂಪದ ಪೆಟ್ಟಾಗಿತ್ತು. ಸದರಿ ಆಸ್ಪತ್ರೆಯವರು ಧನುಷ ಅವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಮಿಷನ್ ಆಸ್ಪತ್ರೆಗೆ ಹೋಗಲು ತಿಳಿಸಿದರು. ನಂತರ ಅದೇ ದಿನ ಧನುಷಗೆ ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ರಾತ್ರಿ 9.00 ಗಂಟೆಗೆ ಧನುಷ ಮೃತರಾದರು ಎನ್ನುವ ವಿಚಾರ ತಿಳಿಯಿತು. ಧನುಷ ಇವರು ಕೆ ಆರ್ ನಗರದಿಂದ ಸಾಲಿಗ್ರಾಮದ ಕಡೆಗೆ ಪಲ್ಸರ ವಾಹನದಲ್ಲಿ ಬರುವಾಗ ಎದುರುಗಡೆಯಿಂದ ಒಬ್ಬ ವ್ಯಕ್ತಿ ಸ್ಪ್ಲೆಂಡರ್ ವಾಹನದಲ್ಲಿ ಅತೀವೇಗವಾಗಿ ಬಂದು ಮುಖಾಮುಖಿಯಾಗಿಯಾಗಿ ಡಿಕ್ಕಿ ಹೊಡೆದರು. ಈ ರೀತಿ ಡಿಕ್ಕಿ ಹೊಡೆಸಿದ ಪರಿಣಾಮವಗಿ ಧನುಷ ಇವರಿಗೆ ತೀವ್ರ ಸ್ವರೂಪದ ಗಾಯಗಳಿಂದಾಗಿ ಮೃತ ಹೊಂದಿರುತ್ತಾರೆ. ಸಾಕ್ಷಿಗೆ ಸ್ಥಳ ಮಹಜರ್ ನ್ನು ನೋಡಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 13 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 13 ಎ ಎಂದು ಗುರುತಿಸಲಾಯಿತು.

ದಿನಾಂಕ **07.09.2016** ರಂದು ನಾನು ಬಸ್ ಸ್ಟ್ಯಾಂಡ್ ಬಳಿ ಇರುವಾಗ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು ನಂತರ ನಾನು ಹೋಗಿ ತೋರಿಸಿಕೊಟ್ಟ ಸ್ಥಳದಲ್ಲಿ ಪೋಲಿಸರು ಮದ್ಯಾಹ್ನ **3.30** ಯಿಂದ **4.30** ವರೆಗೂ ಮಹಜರ್ ಮಾಡಿದ್ದು ಅದೇ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದರು. ಸಾಕ್ಷಿಗೆ ನಿಪಿ **3** ರಿಂದ **10** ಪೋಟೋಗಳನ್ನು ತೋರಿಸಿದ್ದು ಸಾಕ್ಷಿ ಅದನ್ನು ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ಅದೇ ದಿನ ಪೋಲಿಸರು ಘಟನಾ ಸ್ಥಳದಲ್ಲಿದ್ದ 2 ವಾಹನಗಳಾದ ಸದಖ್ಯೆ ಬಜಾಜ್ ಪಲ್ಸರ ವಾಹನ ಸಂಖ್ಯೆ ಕೆಎ 09 ಹೆಚ್ ಜೆ 2631 ಮತ್ತು ಸ್ಪ್ಲೆಂಡರ್ ಪ್ರೊ ವಾಹನ ಸಂಖ್ಯೆ ಕೆಎ 45 ಡಬ್ಲ್ಯೂ 0260 ನ್ನು ಸ್ಥಳದಿಂದ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

**ಪಾಟೀ ಸವಾಲು ಶ್ರೀ ಬಿ ಕೆ ಎನ್ ವಕೀಲರಿಂದ ಆರೋಪಿ ಪರ ವಕೀಲರು :**

ಮೃತ ಧನುಷ ನನಗೆ ಪರಿಚಯಸ್ಥರು ಹಾಗೂ ದಾಯಾದಿ ಎಂದರೆ ಸರಿ. ಮೃತ ಧನುಷ ಇವರ ಬಳಿ ಯಾವ ವಾಹನ ಇತ್ತು ಎನ್ನುವ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಪಲ್ಸರ ಎಂದು ನುಡಿಯುತ್ತಾರೆ.

**2.** ನಾನು ಅಪಘಾತದ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ ಆದರೆ ಅಪಘಾತವನ್ನು ಕಣ್ಣಾರೆಯಾಗಿ ನೋಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮಹಜರ ಗೆ ಬಂದಿದ್ಮು ಹಾಗೂ ಆಸ್ಪತ್ರೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ. ನನಗೆ ಮಹಜರ್ ಗೆ ಹಾಜರಾಗಲು ಪೋಲಿಸರು ನೋಟಿಸ ನೀಡಿರುವುದಿಲ್ಲ.

**3.** ನಿಮಗೆ ಪೋಲಿಸರು ಮಹಜರ್ ಬರೆಯುವ ವಿಚಾರ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನಾನು ಬಸ್ ಸ್ಟ್ಯಾಂಡ್ ಬಳಿ ಇದ್ದೆ ಎಂದು ನುಡಿಯುತ್ತಾರೆ. ನಾನು ಮಹಜರ್ ಸ್ಥದಲ್ಲಿದ್ದರಿಂದ ನನಗೆ ಆ ಬಗ್ಗೆ ಗೊತ್ತಾಗಿ ನಾನು ಸ್ಥಳಕ್ಕೆ ಹೋದೆ ಎಂದರೆ ಸರಿ. ಮಜರ್ ಬರೆದ

ಸ್ಥಳ ಹಾಗೂ ಬಸ ಸ್ಟ್ಯಾಂಡ್ ಇರುವ ಸ್ಥಳ ಜನಸಂದಣಿ ಇರುವ ಸ್ಥಳ ಎಂದರೆ ಸರಿ. ಸಾಲಿಗ್ರಾಮ ಬಸ್ ಸ್ಟ್ಯಾಂಡ್ ಗೆ 2 ಮುಖ್ಯ ದ್ವಾರಗಳು ಇವೆ ಎಂದರೆ ಸರಿ.

3. ಬಸ್ ಗಳು ಪೂರ್ವದಿಂದ ಬಸ್ ಸ್ಟ್ಯಾಂಡ್ ಒಳಗಡೆ ಬಂದು ಪಶ್ಚಿಮದಿಂದ ಹೊರಹೋಗುತ್ತವೆ ಎಂದರೆ ಸಾಕ್ಷಿ ಪೂರ್ವದಿಂದ ಒಳಗೆ ಬಂದು ದಕ್ಷಿಣದಿಂದ ಹೊರಗೆ ಹೋಗುತ್ತವೆ ಎಂದು ನುಡಿಯುತ್ತಾರೆ. ದಕ್ಷಿಣ ದಿಕ್ಕಿಗೆ ಬಂದು ದಾರಿಇದ್ದಿರಿಂದ ಸದರಿ ಬಸ್ ಸ್ಟ್ಯಾಂಡ್ ಗೆ ಹೋಗಲು ಉತ್ತರ ದಿಕ್ಕಿನಿಂದಲೂ ಒಂದು ದಾರಿ ಇದೆ ಎಂದರೆ ಸರಿಯಲ್ಲ.

4. ಬಸ್ ಸ್ಟ್ಯಾಂಡಎದುರು ಇರುವ ಅರಳಿ ಮರ ಇರುವ ರಸ್ತೆ 2 ರಸ್ತೆ ಕೂಡುವ ಸ್ಥಳ ಎಂದರೆ ಸರಿ. ಈ 2 ರಸ್ತೆಗಳಲ್ಲಿ ಒಂದು ಉತ್ತರ ದಿಕ್ಕಿನ ಕಡೆಯಾಗಿ ಬಂದು ಪಶ್ಚಿಮ ದಿಕ್ಕಿನ ಕಡೆಗೆ ಸೇರುತ್ತದೆ ಎಂದರೆ ಸರಿ. ಕೆರೆ ರಸ್ತೆ ಬಳಿ ಆಟೋ ಸ್ಟ್ಯಾಂಡ ಮತ್ತು ಮೆಟೋ ಸ್ಟ್ಯಾಂಡ್ ಇದೆ ಎಂದರೆ ಸರಿ.

5. ಆಟೋ ಸ್ಟ್ಯಾಂಡ್ ನ ಮುಂಭಾಕ್ಕೆ ಹೋದಾಗ ಅಲ್ಲಿ 2 ಹಂಸ್ ಗಳು ಇವೆ ಎಂದರೆ ಸರಿಯಲ್ಲ, ಸಾಕ್ಷಿ 1 ಇದೆ ಎಂದು ನುಡಿಯುತ್ತಾರೆ. ಸದರಿ ಹಂಪಿನ ಸ್ವಲ್ಪ ಮುಂದೆ ಹೋದರೆ ಅಲ್ಲಿ ವಾಣಿಜ್ಯ ಕಟ್ಟಡಗಳಿವೆ ಇದೆ ಎಂದರೆ ಸಾಕ್ಷಿ ಅಪಘಾತ ಸಮಯದಲ್ಲಿ ಇರಲಿಲ್ಲ ಆದರೆ ಅವು ಇತ್ತಿಚೇಗೆ ಆಗಿವೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಕೋಳಿ ಅಂಗಡಿಗಳು ಇವೆ ಎಂದರೆ ಸಾಕ್ಷಿ 1 ಮಾತ್ರ ಇತ್ತು ಎಂದು ನುಡಿಯುತ್ತಾರೆ.

6. ಅಪಘಾತದ ಸ್ಥಳ ಜನಸಂದಣಿ ಹೊಂದಿದ ರಸ್ತೆ ಎಂದರೆ ಸರಿಯಲ್ಲ. ಸಾಲಿಗ್ರಾಮ ಬಸ್ ಸ್ಟ್ಯಾಂಡ್ ಇರುವ ಸ್ಥಳ ಜನಸಂದಣಿಯಿಂದ ಕೂಡಿದ ಸ್ಥಳ ಆಗಿದ್ದರೂ ಸಹ ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆರೆ ಬಳಿ ಇರುವ ರಸ್ತೆ ಸ್ವಲ್ಪ ಕಿರಿಯದಾದ ರಸ್ತೆ ಅಲ್ಲಿ ಸಾಕಷ್ಟು ವಾಹನ ಓಡಾಡುತ್ತವೆ ಎಂದರೆ ಸರಿಯಲ್ಲ.

7. ಸದರಿ ಅಪಘಾತ ಧನುಷ ಇವರ ಅಜಾಗರೂಕತೆ ಮತ್ತು ಅತೀವೇಗದ ವಾಹನ ಚಲಾವಣೆಯಿಂದ ಆಗಿರುತ್ತದೆ ಎಂದರೆ ಸಾಕ್ಷಿ ಧನುಷ ಗಾಡಿ ನಿಧಾನವಾಗಿ ಓಡಿಸುತ್ತಿದ್ದರು ಎಂದು ನುಡಿಯುತ್ತಾರೆ.

8. ಮಹಜರ್ ಬರೆಯುವ ಸಮಯದಲ್ಲಿ ಸ್ಥಳಕ್ಕೆ ನಾನು ತಡವಾಗಿ ಹೋಗಿದ್ದರಿಂದ ಮಹಜರ್ ನಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪೋಲೀಸನವರು ಮಹಜರ್ ಮೇಲೆ ಸಹಿ ಹಾಕಿ ಎಂದು ಹೇಳಿದ್ದಕ್ಕೆ ಸಹಿ ಮಡಾಡಿದ್ದೆ ಎಂದರೆ ಸರಿಯಲ್ಲ.

**9.** ನೀವು ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿದರಾ ಎಂದರೆ ಸಾಕ್ಷಿಇಲ್ಲ ಎಂದು ನುಡಿಯುತ್ತಾರೆ. ನಾನು ಮಹಜರ್ ಬರೆಯುವ ಸಮಯದಲ್ಲಿ ಹಾಜರು ಇರಲಲ್ಲ ಮಹಜರ್ ಗೆ ಸಹಿ ಮಾಡಿರುವುದಿಲ್ಲ, ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**10.** ನನಗೆ ಅಪಘಾತಕ್ಕೊಳಗಾದ ವಾಹನಗಳ ನೊಂದಣಿ ಸಂಖ್ಯೆ ಗೊತ್ತಿಲ್ಲ ಎಂದರೆ ಸರಿ. ನನಗೆ ವಾಹನಗಳ ಸಂಖ್ಯೆ ಗುರುತಿಲ್ಲದ ಕಾರಣ ನಿಪಿ **3** ರಿಂದ **10** ರಲ್ಲಿರುವ ವಾಹನ ಗುರುತಿಸಲಾಗುವುದಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಅಪಘಾತಕ್ಕೊಳಗಾದ ವಾಹನಗಳು ಅಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನಾನು ಮಹಜರ್ ಗೆ ಹೋಗಿದ್ದೆ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 190/2017**

**ಪಿಡಬ್ಲ್ಯೂ-2**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಭಾಸ್ಕರ ಆರ್ ಡಿ |
| ತಂದೆಯ ಹೆಸರು | - | ದೇವರಸೇಗೌಡ |
| ವಯಸ್ಸು | - | 48 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ರಾಂಪುರ ಗ್ರಾಮ |

**ದಿನಾಂಕ 04-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಮೃತ ಧನುಷ ನನ್ನ ಅಣ್ಣನ ಮಗ. ದಿನಾಂಕ **06.09.2016** ರಂದು ಸಂಜೆ ಸುಮಾರು **6.30** ಗಂಟೆ ಸಮಯಕ್ಕೆ ಚಾಸಾ **3** ರವರು ದೂರವಾಣಿ ಮುಖಾಂತರ ಕರೆ ಮಾಡಿ ನಿಮ್ಮ ಅಣ್ಣನ ಮಗನ ಅಪಘಾತ ಆಗಿದೆ ಎಂದು ವಿಚಾರ ತಿಳಿಸಿ ಬರಬೇಕು ಎಂದು ಹೇಳಿದರು. ನಾನು ಸದರಿ ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ಧನುಷಗೆ ತಲೆ ಹಾಗೂ ಮೈ ಕೈಗೆ ತೀವ್ರ ಸ್ವರೂಪದ ಏಟಾಗಿ ಸ್ವಲ್ಪ ಉಸಿರಾಡುತ್ತಿದ್ದು ಕಂಡು ಬಂತು. ನಂತರ ಸಾಲಿಗ್ರಾಮ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ಅವರು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಮಿಷನ್ ಆಸ್ಪತ್ರೆಗೆ ಹೋಗಲು ತಿಳಿಸಿದರು. ನಂತರ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅದೇ ದಿನ ರಾತ್ರಿ **9.00** ಗಂಟೆಗೆ ಧನುಷ ಮೃತರಾಗಿರುತ್ತಾರೆ. ಧನುಷ ಇವರು ಕೆ ಆರ್ ನಗರದಿಂದ ಮಿರ್ಲೆಗೆ ಹೋಗುತ್ತಿದ್ದರು, ಆರೋಪಿ ಇವರು ಸಾಲಿಗ್ರಾಮದಿಂದ ಬೇರ್ಯ ಕಡೆಗೆ ಹೋಗುತ್ತಿದ್ದರು. ಇವರಿಬ್ಬರ ದ್ವಿಚಕ್ರ ವಾಹನಗಳು ಮುಖಾಮುಖಿ ಆಗಿ ಡಿಕ್ಕಿಆಗಿರುವ ಬಗ್ಗೆ ವಿಚಾರ ತಿಳಿಯಿತು. ನನಗೆ ಅಲ್ಲಿ ಇದ್ದ ವ್ಯಕ್ತಿಗಳು ಧನುಷ ಇವರು ನಿಧಾನವಾಗಿ ಬರುತ್ತಿದ್ದರು, ಆದರೆ ಎದುರುಗಡೆ ಬರುತ್ತಿದ್ದವರು ಸ್ಪೀಡ್ ಆಗಿ ಬರುತ್ತಿದ್ದರು ಎಂದು ಗೊತ್ತಾಯಿತು. ನಾನು ಸದರಿ ವಿಚಾರವನ್ನು ಠಾಣೆಗೆ ಹೋಗಿ ಪೋಲಿಸ್‌ರಿಗೆ ತಿಳಿಸಿದ್ದು, ಸಾಕ್ಷಿ ದೂರಿನ ಪ್ರತಿ ನೋಡಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು

ನಿಪಿ 2 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಅಪಘಾತಪಡಿಸಿದ ದ್ವಿಚಕ್ರ ವಾಹನದ ಫೋಟೋವನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಪಿ 3 ರಿಂದ 11 ಎಂದು, 2 ಸಿಡಿ ಯನ್ನು 11 ಮತ್ತು 12 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಮರು ವಿಚಾರಣೆ - ಇರುವುದಿಲ್ಲ

ಪಾಟೀ ಸವಾಲು ಶ್ರೀ ಬಿ ಕೆ ಎನ್ ವಕೀಲರಿಂದ :

ಸದರಿ ಅಪಘಾತವಾದ ಸ್ಥಳ ಸಾಲಿಗ್ರಾಮ ಬಸ್ ಸ್ಟ್ಯಾಂಡ್ ಕೆರೆ ಬಳಿಯ ರಸ್ತೆ ಎಂದರೆ ಸರಿ. ಸದರಿ ಸಾಲಿಗ್ರಾಮ ಬಸ್ ಸ್ಟ್ಯಾಂಡ್ ಬಳಿ ಆಟೋ ಸ್ಟ್ಯಾಂಡ್ ಮತ್ತು ಮೆಟಾಲ್ ಸ್ಟ್ಯಾಂಡ್ ಇದೆ ಎಂದರೆ ಸರಿ. ಅದೇ ರೀತಿ ಕೇರಳಾಪುರ ಕಡೆಯಿಂದ ರಸ್ತೆಗೆ ಒಂದು ಸಾಲಿಗ್ರಾಮದ ಬಸ್ ಸ್ಟ್ಯಾಂಡ್ ಕಡೆಯಾಗಿ ಒಂದು ತಿರುವು ಎಂದರೆ ಸರಿಯಲ್ಲ.

2. ಸಾಲಿಗ್ರಾಮದಿಂದ ಮಿರ್ಲೆಗೆ ಹೋಗಲು ಒಂದು ನೇರ ರಸ್ತೆ ಇದೆ ಎಂದರೆ ಸರಿ. ಅದರ ಪಕ್ಕದಲ್ಲಿ ಮುಂದೆ ಒಂದು ತಿರುವು ರಸ್ತೆ ಕೂಡ ಅದಕ್ಕೆ ಸೇರ್ಪಡೆ ಆಗುತ್ತದೆ ಎಂದರೆ ಸರಿಯಲ್ಲ. ಸದರಿ ತಿರುವು ರಸ್ತೆಯ ಬಳಿ ಕೋಳಿ ಅಂಗಡಿ ಹಾಗೂ ಢಾಬಾ ಇದೆ ಮತ್ತು ಅಲ್ಲಿ ಜನಸಂದಣಿ ಜಾಸ್ತಿ ಇದೆ ಎಂದರೆ ಸರಿಯಲ್ಲ. ಸದರಿ ತಿರುವು ರಸ್ತೆಯಲ್ಲಿ 2,3 ಹಂಸ್ ಗಳು ಇವೆ ಎಂದರೆ ಸರಿಯಲ್ಲ.

3. ಕೆರೆ ಬಳಿ ಇರುವ ರಸ್ತೆ ಇಕ್ಕಟ್ಟು ರಸ್ತೆ ಎಂದರೆ ಸರಿಯಲ್ಲ. ಕೆರೆ ಬಳಿ ಇರುವ ರಸ್ತೆಯಲ್ಲಿ ಮಳೆ ಬಂದ ಸಂದರ್ಭದಲ್ಲಿ ಅಲ್ಲಿ ಕೆಲವೊಂದು ಹಳ್ಳ ಹಾಗೂ ಗುಂಡಿಗಳು ಬರುತ್ತವೆ ಎಂದರೆ ಸರಿಯಲ್ಲ. ಕೃಷ್ಣ ಚೌಟರಿಯಿಂದ ಹಿಡಿದು ಕೆರೆಯವರೆಗೂ ಒಂದು ಇಳಿಜಾರಿನ ರಸ್ತೆ ಇದೆ ಎಂದರೆ ಸರಿಯಲ್ಲ.

4. ಧನುಷ ಇವರು ಪಲ್ಸರ್ ದ್ವಿ ಚಕ್ರ ವಾಹವನ್ನು ಓಡಿಸುತ್ತಿದ್ದರು. ಸಾಮಾನ್ಯವಾಗಿ ವೇಗವನ್ನು ಅಪೇಕ್ಷೆ ಪಡುವ ವ್ಯಕ್ತಿಗಳು ಪಲ್ಸರ ಹಾಗೂ ಯಮಹ ಅಂತ ವಾಹನಗಳನ್ನು ಅಪೇಕ್ಷೆ ಪಡುತ್ತಾರೆ ಎಂದರೆ ಸರಿಯಲ್ಲ, ನನಗೆ ಧಚಿನುಷ

ಚಾಲುಯಿಸುತ್ತಿದ್ದ ದ್ವಿಚಕ್ರ ವಾಹನ ಎಷ್ಟು ಸಿಸಿ ಎಂದು ನನಗೆ ಗೊತ್ತಿಲ್ಲ, ಸದರಿ ವಾಹನ 220 ಸಿಸಿ ಹೊಂದಿದ್ದ ವಾಹನ ಎಂದರೆ ನನಗೆ ಗೊತ್ತಿಲ್ಲ.

5. ಸದರಿ ವಾಹನ ಕ್ಷಣಾರ್ಧದಲ್ಲಿ ವೇಗವನ್ನು ವರ್ತನೆ ಮಾಡಿಕೊಳ್ಳುವಂತ ಸಾಮರ್ಥ್ಯವನ್ನು ಹೊಂದಿದ ವಾಹನ ಎಂದರೆ ನನಗೆ ಗೊತ್ತಿಲ್ಲ, ನನಾು ಪಲ್ಸರ ವಾಹವನ್ನು ಓಡಿಸಿರುತ್ತೇನೆ. ನಾನು ಪಲ್ಸರ ವಾಹನ ಓಡಿಸದೆ ಇರುವುದರಿಂದ ನನಗೆ ಆ ವಾಹನದ ವೇಗದ ಸಾಮರ್ಥ್ಯ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನಾನು ಗಾಡಿ ಓಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣನ ಮಗ ಪಲ್ಸರ ವಾಹವನ್ನು ಎಷ್ಟು ವರ್ಷದಿಂದ ಓಡಿಸುತ್ತಿದ್ದರು ಎಂದರೆ ಸಾಕ್ಷಿ ಕಳೆದ 2 ವರ್ಷಗಳಿಂದ ಎಂದು ನುಡಿಯುತ್ತಾರೆ. ಶಾಸಕರಾದ ಸಾ.ರಾ.ಮಹೇಶ ರವರು ಸಾವಿಗೆ ಬಂದಿದ್ದರು ಎಂದರೆ ಸರಿ.

6. ಸದರಿ ದಿನದಂದು ಧನುಷ ಇವರು ತನ್ನ ವಾಹವನ್ನು ಅತೀ ವೇಗವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸರ್ಕಾರ ವಿದ್ಯಾರ್ಥಗಳಿಗೆ ಸರ್ಕಾರಿ ಸಾರಿಗೆಯನ್ನು ಬಳಿಯನ್ನು ಶಾಲಾ ಕಾಲೇಜುಗಳಿಗೆ ಹೋಗಲು ಉಚಿತ ಪಾಸ( ನೀಡುತ್ತದೆ ಎಂದರೆ ಸರಿ.

7. ಸಾಮಾನ್ಯವಾಗಿ ಸಾಲಿಗ್ರಾಮದಿಂದ ಮೈಸೂರಿಗೆ ಹೋಗಲು ತಡೆರಹಿತ ಸಾರಿಗೆ ವ್ಯವಸ್ಥೆ ಇದೆ ಎಂದರೆ ಸರಿ. ಸಾಲಿಗ್ರಾಮದಿಂದ ಮೈಸೂರಿಗೆ ಹೋಗಲು ಒಂದೂವರೆ ಗಂಟೆ ಸಮಯ ಬೇಕು ಎಂದರೆ ಸಾಕ್ಷಿ 2 ಗಂಟೆ ಬೇಕು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸ್ಪ್ಲೆಂಡರ್ ವಾಹನ 120 ಸಿಸಿ ವಾಹನ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

8. ಸಾಮಾನ್ಯವಾಗಿ ಪಲ್ಸರ್ ವಾಹನ ಸ್ಪ್ಲೆಂಡರ್ ವಾಹನಕ್ಕಿಂತ ಹೆಚ್ಚಿನ ಸಿಸಿ ಸಾಮರ್ಥ್ಯದ ವಾಹನ ಎಂದರೆ ಸರಿ. ಕೃಷ್ಣ ಚೌಟರಿಯಿಂದ ಕೆರೆಯವರೆಗೂ ಮಿರ್ಲೆ ಕಡೆಯಿಂದ ಬರುವಾಗ ಒಂದು ಕಡಿದಾದ ಇಳಿಜಾರಿನ ರಸ್ತೆ ಇದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಧನುಷ ಇವರು ಕೃಷ್ಣ ಚೌಟರಿಯಿಂದ ಕೆರೆಯವರೆಗೂ ಇರುವ ರಸ್ತೆಯಿಂದ ಅತೀವೇಗವಾಗಿ ಒಂದು ಕೆ ಎಸ್ ಅರ್ ಟಿ ಸಿ ಬಸ್ಸನ್ನು ಹಿಂದಕ್ಕೆ ದುಡಿ ಅಜಾಗರೂಕತೆಯಿಂದ ಹಾಗೂ ಅತೀವೇಗವಾಗಿ ಪಲ್ಸರ ಬೈಕನ್ನು ಓಡಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

10. ಸದರಿ ಸಾಲಿಗ್ರಾಮ ಬಸ್ ಸ್ಟ್ಯಾಂಡ್ ಬಳಿ ಆಟೋ ಸ್ಟ್ಯಾಂಡ್ ಮತ್ತು ಮೆಟಾಲ್ ಸ್ಟ್ಯಾಂಡ್ ಮತ್ತು ಜನಜಂಗುಳಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಿಪಿ 2 ನ್ನು ಯಾರು ಹೇಳಿ ಬರೆಸಿದ್ದರೂ ಎಂದರೆ ಸಾಕ್ಷಿ ನಾನೇ ಬರೆದಿರುತ್ತೇನೆ ಎಂದುನುಡಿಯುತ್ತಾರೆ. ನಿಪಿ 2 ನ್ನು ನಾನು ಪೋಲಿಸ್ ಠಾಣೆ ಮುಂಭಾಗದಲ್ಲಿ ಬರೆದಿರುತ್ತೆನೆ. ನಿಪಿ 2 ನ್ನು ನಾನು ಪೋಲಿಸನವರು ಹೇಳಿದ ಪ್ರಕಾರ ಬರೆದಿರುತ್ತೇನೆ ಎಂದರೆ ಸರಿಯಲ್ಲ.

12. ಪೋಲಿಸ್ ಠಾಣೆಗೆ ಮುಂದೆ ನಿಪಿ 3 ರಿಂದ 10 ರಲ್ಲಿ ತೋರಿಸಿರುವ ವಾಹನಗಳು ನಿಂತಿರುತ್ತವೆ ಎಂದರೆ ಸಾಕ್ಷಿ ಅದರಲ್ಲಿ ತೋರಿಸಿದ ಗಾಡಿ ನನ್ನ ಮಗನದ್ದು ಎಂದು ನುಡಿಯುತ್ತಾರೆ. ಸದರಿ ಅಪಘಾತದ ಬಗ್ಗೆ ನನಗೆ ನಮ್ಮ ಊರಿನವರಾದ ಪುರುಷೋತ್ತಮ ಇವರು ವಿಚಾರ ತಿಳಿಸಿರುತ್ತಾರೆ.

13. ನಾನು ಸದರಿ ದೂರನ್ನು ಪರಿಹಾರಕ್ಕಾಗಿ ಸೃಷ್ಠಿ ಮಾಡಿ ದಾಖಲಿಸಿದ ದೂರು ಎಂದರೆ ಸರಿಯಲ್ಲ. ಯಾವುದೇ ವಾಹನ ರಸ್ತೆ ದುಬ್ಬವನ್ನು ದಾಟಿದ ನಂತರ ವೇಗವನ್ನು ಹೆಚ್ಚಿಸಿಕೊಳ್ಳಲು 300 ರಿಂದ 400 ಮಿ ನಂತರ ದಾಟಿದ ನಂತರವೇ ಸಾಧ್ಯ ಎಂದರೆ ಸರಿಯಲ್ಲ. ಆರೋಪಿ ಇವರು ತಮ್ಮ ಸ್ಪ್ಲೆಂಡರ್ ವಾಹನಮ್ನು ನಿಧಾನವಾಗಿ ಹಾಗೂ ಜಾಗರೂಕತೆಯಿಂದ ಚಲಾಯಿಸಿಕೊಂಡು ಬರುತ್ತಿದದರು ಎಂದರೆ ಸರಿಯಲ್ಲ.

14. ಆರೋಪಿ ಇವರು ಸಂಸಾರಸ್ಥರಾಗಿದ್ದರಿಂದ ವಾಹನವನ್ನು ವೇಗವನ್ನು ಚಾಲಯಿಸುವ ವ್ಯಕ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಾಲೇಜಿನ ಹುಡುಗರು ಮಾತ್ರ ಅತೀವೇಗವಾಗಿ ವಾಹನವನ್ನುಚಾಲಯಿಸುತ್ತಾರೆ ಎಂದರೆ ಸರಿಯಲ್ಲ. ನನಗೆ ಸದರಿ ಘಟನೆ ಬಗ್ಗೆ ಯಾವುದೇ ಕರೆ ಬಂದಿಲ್ಲ, ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಸಾಲಿಗ್ರಾಮದ ಕಡೆಯಿಂದ ಬಂದ ವಾಹನ ಜನಜನಂಗುಳಿ ದಾಟಿ ಬಂದ ವಾಹನ ಆಗಿದ್ದರಿಂದ ಅದು ಅತೀವೇಗವಾಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಧನುಷ

ಇವರೇ ಮಿರ್ಲ ಕಡೆಯಿಂದ ಅತೀವೇಗವಾಗಿ ಬಂದು ಯಾವುದೇ ಅಡೆತಡೆ ಇಲ್ಲದ ಕಾರಣ ಅತೀವೇಗದಿಂದ ಬಂದು ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ